

ಕನ್ನಡದ ಹೊಸ ತಲೆಮಾರಿನ ಲೇಖಕರು ತಮ್ಮ ಕೃತಿಗಳ ಬಗ್ಗೆ ವಿಮರ್ಶೆ ಬರುತ್ತಿಲ್ಲ ಎಂದು ಆಗಾಗ ದೂರುತ್ತಿರುತ್ತಾರೆ. ಇದು ಎಲ್ಲ ತಲೆಮಾರಿನ ಲೇಖಕರ ದೂರು. ಸಾಹಿತ್ಯದಲ್ಲಿ ಕೃತಿ ರಚನೆ, ವಿಮರ್ಶೆ, ಸಂವಾದಗಳು ಸಮಾನಾಂತರವಾಗಿ ನಡೆಯಬೇಕಾದ ಕ್ರಿಯೆಗಳು. ಸಾಹಿತ್ಯ ಪರಿಸರವನ್ನು ಬೆಳೆಸುವಲ್ಲಿ, ಜೀವಂತವಾಗಿ ಇಡುವ ದಿಸೆಯಲ್ಲಿ ವಿಮರ್ಶೆಯ ಪಾತ್ರ ಬಹು ಮುಖ್ಯವಾದುದು. ಆ ಹಿನ್ನೆಲೆಯಲ್ಲಿ ‘ಮಯೂರ’ ಕೇಳಿದ ಪ್ರಶ್ನೆಗಳಿಗೆ ಹೊಸ ತಲೆಮಾರಿನ ಬರಹಗಾರರ ಎರಡು ಸ್ಪಂದನಗಳು ಇಲ್ಲಿವೆ. ಇದಕ್ಕೆ ಓದುಗರು, ಲೇಖಕರು ತಮ್ಮ ಪ್ರತಿಕ್ರಿಯೆ, ಪ್ರತಿಸ್ಪಂದನೆಗಳನ್ನು ಕಳುಹಿಸಿ ಈ ಸಂವಾದದಲ್ಲಿ ಭಾಗಿಯಾಗಬಹುದು.

ಪ್ರತಿಕ್ರಿಯೆಗಳನ್ನು ಕಳುಹಿಸಬೇಕಾದ ವಿಳಾಸ: ಸಂಪಾದಕ, ‘ಮಯೂರ’, ಪ್ರತಿಸ್ಪಂದನೆ ವಿಭಾಗ, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560 001 ಇ–ಮೇಲ್: editormy@mayura.co.in

## ‘ಮಯೂರ’ದ ಪ್ರಶ್ನೆಗಳು

1 ‘ಸರಿಯಾದ’ ವಿಮರ್ಶೆ ಬರದಿರಲು ಕಾರಣಗಳು ಏನು? ಮತ್ತು ಯಾರು? ವಿಮರ್ಶಕರೆ, ಪತ್ರಿಕೆಗಳೆ, ವಿಶ್ವವಿದ್ಯಾಲಯಗಳೆ? ಅಥವಾ ಅದು ಕೆಲವು ಗುಂಪುಗಳ ಕೈವಾಡವೇ?

2 ವಿಮರ್ಶೆ ಬರಲೇ ಬೇಕು ಎಂದು ಒತ್ತಾಯಿಸುವುದು ಅಥವಾ ದೂರುವುದು ಸರಿಯೇ? ಅದು ಕೇಳಿ ತೆಗೆದುಕೊಳ್ಳಬೇಕಾದ ಮರ್ಯಾದೆಯೇ?

3 ದೂರುವ ಲೇಖಕರು ತಮ್ಮ ಸಮಕಾಲೀನರ ಎಷ್ಟು ಕೃತಿಗಳನ್ನು ಓದಿ ವಿಮರ್ಶೆ ಬರೆದಿದ್ದಾರೆ? ಅದು ವೃತ್ತಿಪರ ವಿಮರ್ಶಕರು ಮಾತ್ರ ಮಾಡುವ ಕೆಲಸವೇ? ಸಮಕಾಲೀನ ಲೇಖಕನೊಬ್ಬನ ಪ್ರಾಮಾಣಿಕ ಮಾತುಗಳು ವಿಮರ್ಶೆಯೇ ಅಲ್ಲವೇ? ಆ ಬಗೆಯ ಬರವಣಿಗೆ ನಿಮಗೆ ಕಂಡಿದ್ದರೆ ಅದನ್ನು ಉಲ್ಲೇಖಿಸಿ.

4 ವಿಮರ್ಶಕರು ಹೊಸ ತಲೆಮಾರಿನ ಲೇಖಕರ ಕೃತಿಗಳ ಬಗ್ಗೆ ಬರೆದಿಲ್ಲ ಎಂದರೆ ಅವರು ಮುಖ್ಯವಾದುದ್ದನ್ನು ಬರೆದಿಲ್ಲ ಎಂದು ಅರ್ಥವೆ? ಅಥವಾ ಅದು ಅವರ ನಿರ್ಲಕ್ಷ್ಯವೇ? ನಿಮ್ಮ ಪ್ರಕಾರ ಕೃತಿಯನ್ನು ಆರಿಸಿಕೊಳ್ಳಲು ವಿಮರ್ಶಕನ ಮಾನದಂಡಗಳೇನಿರಬೇಕು? ಮತ್ತು ಪ್ರಕಟವಾದ ಎಲ್ಲ ಸಾಹಿತ್ಯದ ಬಗ್ಗೆ ಬರೆದುಕೊಂಡು ಇರುವುದು ಮಾತ್ರ ವಿಮರ್ಶಕರ ಕೆಲಸವೇ?

5 ತಮ್ಮ ಕೃತಿಗೆ ವಿಮರ್ಶೆ ಬಂದ ಬಳಿಕ ಹೊಸ ಲೇಖಕರ ಬರೆಯುವ ರೀತಿ ಬದಲಾಗುತ್ತದೆಯೇ? ಅದನ್ನು ಅವರ ಬರವಣಿಗೆಗೆ ಮಾರ್ಗದರ್ಶನ ಎಂದು ಭಾವಿಸಿದ್ದಾರೆಯೇ? ವಿಮರ್ಶೆಯಿಂದ ಅವರು ನಿರೀಕ್ಷಿಸುವ ಅಂಶಗಳು ಏನು?

6 ಒಂದು ವೇಳೆ ವಿಮರ್ಶೆಯೇ ಇಲ್ಲದಿದ್ದರೆ ಏನಾಗುತ್ತದೆ?

7 ನೀವು ಯಾರನ್ನು (ಓದುಗ, ವಿಮರ್ಶಕ) ದೃಷ್ಟಿಯಲ್ಲಿಟ್ಟುಕೊಂಡು ಬರೆಯುತ್ತೀರಿ?